## 7. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬಂಡಿಗಡಿ.




ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ದೇವಗಂಗೆಯಂತೆ ಹರಿಯುತ್ತಿರುವ ತಾಯಿ ತುಂಗೆಯ ಮಡಿಲಲ್ಲಿ ನೆಲೆಯಾಗಿರುವ, ಕೊಪ್ಪ ಮತ್ತು ತೀರ್ಥಹಳ್ಳಿ ತಾಲ್ಲೂಕಿನ ಗಡಿ ಭಾಗದಲ್ಲಿರುವ ಬಂಡಿಗಡಿ ಗ್ರಾಮದ ಅತ್ತಿಕೊಡಿಗೆ ಎಂಬ ಜನವಸತಿ ಪ್ರದೇಶದಲ್ಲಿ, ಘನ ಕರ್ನಾಟಕ ಸರ್ಕಾರದ ವತಿಯಿಂದವ 1961ರಲ್ಲಿ ಪ್ರಾರಂಭವಾದ ಬಂಡಿಗಡಿ ಶಾಲೆಯು ವ್ಘರ್ಷದಿಂದ ವರ್ಷಕ್ಕೆ ಅಭಿವೃದ್ಧಿಯಾಗುತ್ತಾ ಬಂದಿರುವ ಕುರಿತು ಕಿರು ಪರಿಚಯ.

ಪ್ರಸ್ತುತ 2019/20 ನೇ ಸಾಲಿನಲ್ಲಿ 14 ವಿಧ್ಯಾರ್ಥಿಗಳು ವಿದ್ಯಾಭ್ಯಾಸ ಪಡೆಯುತ್ತಿದ್ದು, ಇಬ್ಬರು ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಎಸ್,ಡಿ,ಎಂ,ಸಿ, ಪೋಷಕರು, ಗ್ರಾಮಸ್ಥರು, ಶಿಕ್ಷಕರ ಸಹಕಾರದಿಂದ ಶಾಲೆಯ ಸರ್ವತೋಮುಖ ಪ್ರಗತಿಗಾಗಿ ಶ್ರಮಿಸಲಾಗುತ್ತಿದೆ.

### ಶಾಲೆಯಅಭಿವೃದ್ಧಿಗಾಗಿ ಸಮುದಾಯದಿಂದ ಹರಿದು ಬಂದ ಕೊಡುಗೆಗಳು

* 2010/11 ನೇ ಸಾಲಿನಲ್ಲಿ ಡಾ// ಭಗವಾನ್ ಸಲಹಾ ವೈದ್ಯರು ಕೊಳಾವರ, ಇವರಿಂದ 25000/- ರೂಪಾಯಿ ಮೌಲ್ಯದ ಆರ್ಥಿಕ ನೆರವು ಪಡೆದು ಕುಡಿಯುವ ನೀರಿನ ವ್ಯವಸ್ಥೆಗಾಗಿ ಮೋಟಾರ್ ಮತ್ತು ಸಿಂಟೆಕ್ಸ್, ಕ್ರೀಡಾ ಸಾಮಾಗ್ರಿಗಳು, ಅಗತ್ಯ ಇರುವ ಕಲಿಕಾ ಸಾಮಾಗ್ರಿಗಳನ್ನು ಮತ್ತು 6.5 ಅಡಿ ಎತ್ತರದ ಗಾಡ್ರೆಜ್ ಬೀರು. ಇವುಗಳನ್ನ ಸಂಗ್ರಹಿಸಲಾಗಿದೆ.

* 2011/12 ರಲ್ಲಿ ಎಸ್,ಡಿ,ಎಂ,ಸಿ, ಪೋಷಕರು, ಮತ್ತು ಗ್ರಾಮಸ್ಥರ ನೆರವಿನಿಂದ ಶಾಲಾ ಮುಂಭಾಗದಲ್ಲಿ 45000/- ರೂಪಾಯಿಗಳ ವೆಚ್ಚದಲ್ಲಿ, ಗಣಿತದ ವಿವಿದ ಆಕೃತಿಗಳ ಮಾದರಿಯಲ್ಲಿ ಸಿಮೆಂಟ್ ಕಟ್ಟೆಗಳನ್ನು ನಿರ್ಮಿಸಿ ಅದರೊಳಗೆ ಮತ್ತು ಸುತ್ತ ಮುತ್ತಲೂ ಗಿಡಗಳನ್ನು ಬೆಳೆಸಿ ಸುಂದರವಾದ ಉದ್ಯಾನವನ ನಿರ್ಮಿಸಲಾಗಿದೆ. ಉದ್ಯಾನವನದ ನಿರ್ವಹಣೆಗಾಗಿ ತುಂತುರು ನೀರಾವರಿ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಉದ್ಯಾನವನದ ಭೌತಿಕ ಸೌಂದರ್ಯ ವರ್ಧನೆಗಾಗಿ ಪ್ರತಿ ವರ್ಷ ಎರಡು ಬಾರಿ ಪೋಷಕರ ನೆರವಿನಿಂದ ಶ್ರಮದಾನದ ಸೇವೆಯನ್ನು ಪಡೆಯಲಾಗುತ್ತಿದೆ.

*2015/16ರಲ್ಲಿ ಅಕ್ಷರ ದಾಸೋಹದ ಕಾರ್ಯಕ್ರಮಕ್ಕೆ ಸಹಾಯವಾಗಲು ರೂ.2500/-ಮೌಲ್ಯದ ಮಿಕ್ಸರ್ ಗ್ರೈಂಡರ್‌ನ್ನು ಶ್ರೀ ಪ್ರೀತಿಸಾಗರ್ ಬಿನ್ ನೀಲಪ್ಪಗೌಡ್ರು ಅತ್ತಿಕೊಡಿಗೆ ಇವರಿಂದ ಕೊಡುಗೆಯಾಗಿ ಪಡೆಯಲಾಗಿದೆ.

*2015/16ರಲ್ಲಿ ಗ್ರಾಮ ಪಂಚಾಯ್ತಿ ಬಸವಾನಿ ಇವರ ವತಿಯಿಂದ 0.5 ಹೆಚ್‌ಪಿ.ವಿದ್ಯುತ್ ಮೋಟಾರನ್ನು ಕೊಡುಗೆಯಾಗಿ ಪಡೆಯಲಾಗಿದೆ.

* 2015/16ರಲ್ಲಿ ಗ್ರಾಮಸ್ಥರ ನೆರವಿನಿಂದ ಅಕ್ಷರ ದಾಸೋಹದ ಅನ್ನಪೂರ್ಣ ಅಡುಗೆ ಕೋಣೆ ಮತ್ತು ಉಗ್ರಾಣಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲಾಯಿತು.

* 2015/16ರಲ್ಲಿ ಶೀ ಸತ್ಯಮೂರ್ತಿ ಹೊಳೆಕೊಪ್ಪ ಇವರಿಂದ ರೂ.4500/- ಮೌಲ್ಯದ 10 ಫೈಬರ್ ಕುರ್ಚಿಗಳನ್ನು ಪಡೆಯಲಾಯಿತು.

*. 2016-17 ನೇ ಸಾಲಿನಲ್ಲಿ ಶಾಲಾ ವತಿಯಿಂದ ನಿರ್ಮಿಸಲಾದ ಕೈ ತೊಳೆಯುವ ಕಟ್ಟೆಗೆ ತೀರ್ಥಹಳ್ಳಿಯ ರೋಟರಿ ಕ್ಲಬ್ ವತಿಯಿಂದ ಟೈಲ್ಸ್ ಮತ್ತು ಪ್ರೆಸ್ಸಿಂಗ್ ನಲ್ಲಿಗಳನ್ನು ಕೊಡುಗೆಯಾಗಿ ಪಡೆಯಲಾಗಿದೆ.

* 2016/17ರಲ್ಲಿ ಶ್ರೀ ಕಾರ್ಮಗ್ಗಿ ರವಿ ಇವರು ಶಾಲಾ ಮುಂಭಾಗದಲ್ಲಿ ಸುಂದರವಾದ ಸ್ವಾಗತ ಕಮಾನು ಮತ್ತು ಶಾಲಾ ಫಲಕವನ್ನು ಅಂದಾಜು ರೂ.45000/- ಮೌಲ್ಯದಲ್ಲಿ ನಿರ್ಮಿಸಿ ಕೊಟ್ಟಿರುತ್ತಾರೆ.

* 2016/17ರಲ್ಲಿ ಶ್ರೀ ರವಿ. ಟಿ. ಇವರು ಶಾಲಾ ಉದ್ಯಾನವನದ ನಡುವಲ್ಲಿ ಒಂದು ಅಂದವಾದ ಪುಟ್ಟಕೊಳವನ್ನು ನಿರ್ಮಿಸಿ ಕೊಟ್ಟಿರುತ್ತಾರೆ. ಆ ಕೊಳದಲ್ಲಿ ತಾವರೆ ಗಿಡವನ್ನು ಬೆಳೆಸಲಾಗಿದ್ದು, ಪ್ರತಿ ದಿನವೂ ಅರಳಿದ ಹೂವುಗಳು ಕಣ್ಮನವನ್ನು ಸೆಳೆಯುತ್ತಿವೆ.

## ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ವಹಿಸಿದ ವಿಶೇಷ ಕಾಳಜಿ

2015/16 ರಿಂದ ಆಂಗ್ಲ ಮಾಧ್ಯಮಕ್ಕೆ ಪೂರಕವಾಗಿ ಶಾಲಾ ಪಠ್ಯದೊಂದಿಗೆ ಹೆಚ್ಚುವರಿ ಇಂಗ್ಲೀಷ್ ಕಲಿಕೆಗಾಗಿ ಪೋಷಕರು ಸ್ವಇಚ್ಛೆಯಿಂದ ಒಬ್ಬ ಗೌರವ ಶಿಕ್ಷಕಿಯವರನ್ನು ನೇಮಿಸಿಕೊಂಡಿದ್ದು, ಅವರಿಗೆ ಮಾಸಿಕ ರೂ.4000/- ಗೌರವ ಧನವನ್ನು ವೇತನವಾಗಿ ನೀಡಲಾಗುತ್ತದೆ. ಈ ವೆಚ್ಚವನ್ನು ಪೋಷಕರ ಸಮಿತಿಯಿಂದ ನಿರ್ವಹಿಸಲಾಗುತ್ತಿದೆ.

## ಶಾಲೆಯ ಮುಡಿಗೇರಿದ ಪ್ರಶಸ್ತಿಯ ಗರಿಗಳು

ತೀರ್ಥಹಳ್ಳಿ ತಾಲ್ಲೂಕು ಶಿಕ್ಷಕರ ದಿನಾಚರಣಾ ಸಮಿತಿಯ ವತಿಯಿಂದ 2015/16ರಲ್ಲಿ ದೇವಂಗಿ ಕ್ಲಸ್ಟರ್ ಮಟ್ಟದ ಉತ್ತಮ ಕಿರಿಯ ಪ್ರಾಥಮಿಕ ಶಾಲೆ ಮತ್ತು 2016/17 ರಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಉತ್ತಮ ಕಿರಿಯ ಪ್ರಾಥಮಿಕ ಶಾಲೆ ಪ್ರಶಸ್ತಿ ನೀಡಿ ಗೌರವಿಸಿದೆ. ಪರಿಸರ ಅಧ್ಯಯನ ಕೇಂದ್ರ, ಕಿಡ್ಸ್ ಮತ್ತು ಜ್ಞಾನ ಸಾಗರ ನಾವೆ ಟ್ರಸ್ಟ್ (ರಿ) ಶಿವಮೊಗ್ಗ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರು, ಇವರ ಜಂಟಿ ಸಹಯೋಗದಲ್ಲಿ ಪ್ರತಿ ವರ್ಷ ಆಯೋಜಿಸುವ ಪರಿಸರ ಮಿತ್ರ ಶಾಲಾ ಕಾರ್ಯಕ್ರಮದಲ್ಲಿ ನಮ್ಮ ಶಾಲೆ ಭಾಗವಹಿಸುತ್ತಿದ್ದು, 2015/16 ರಲ್ಲಿ ಹಳದಿ ಶಾಲೆ ಪ್ರಶಸ್ತಿ, 2016/17ರಲ್ಲಿ ಹಳದಿ ಶಾಲೆ ಪ್ರಶಸ್ತಿ ಮತ್ತು 2017/18ರಲ್ಲಿ ಹಸಿರು ಶಾಲೆ ಪ್ರಶಸ್ತಿಗೆ ಭಾಜನರಾಗಿರುತೇವೆ.

ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ, ಒಂದಲ್ಲ ಒಂದು ದಿನ ಫಲ ನೀಡುತ್ತದೆ. ಎಂಬ ಉಕ್ತಿಯಂತೆ ಮಕ್ಕಳಲ್ಲಿ ಅಕ್ಷರ ಜ್ಞಾನದೊಂದಿಗೆ ಪರಿಸರ ಉಳಿಸಿ ಬೆಳೆಸುವ ಜ್ಞಾನವನ್ನು ನೀಡುತ್ತಾ, ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ಶಾಲಾ ಶಿಕ್ಷಕ ವೃಂದ, ಮತ್ತು ಪೋಷಕ ವೃಂದ ನಿರಂತರವಾಗಿ ಶ್ರಮಿಸುತ್ತಿದೆ.
















ಶಾಲೆಗೆ ವಿವಿಧ ವಸ್ತುಗಳನ್ನು ಕೊಡುಗೆ ನೀಡಿದವರು
ಡಾ. ಭಗವಾನ್ ಸಲಹಾ ವೈದ್ಯರು ಅಮೇರಿಕಾ, ಕೊಳಾವರ.
2010-11
ಕ್ರ.ಸಂ ವಸ್ತುಗಳು ಮತ್ತು ಅಭಿವೃದ್ಧಿ ಮೊತ್ತ
1. 0.5 ಹೆಚ್ ಪಿ, ವಿ-ಗಾರ್ಡ್ ಕರೆಂಟ್ ಮೋಟಾರ್ 8200-00
2. 1000 ಲೀಟರ್ ಸಿಂಟೆಕ್ಸ್ 4550-00
3. 6.5 ಅಡಿ ಎತ್ತರದ ಗೋದ್ರೇಜ್ ಬೀರು 5300-00
4. ವಿಜ್ಞಾನ ಹಾಗು ಸಮಾಜ ವಿಜ್ಞಾನ ಕಲಿಕಾ ಸಾಮಾಗ್ರಿಗಳು 1900-00
5. ಕುಡಿಯುವ ನೀರಿನ ವ್ಯವಸ್ಥೆ 2060-00
6 ಕ್ರೀಡಾಸಾಮಗ್ರಿಗಳು 1290-00
7 ಟೇಪ್ ರೆಕಾರ್ಡರ್ 1700-00
25000-00
ಒಟ್ಟು ಇಪ್ಪತ್ತೈದು ಸಾವಿರ ಮೊತ್ತದ ಸಾಮಗ್ರಿಗಳನ್ನು ನೀಡಲಾಗಿರುತ್ತದೆ
ಶ್ರೀಯುತರಿಗೆ ಕೃತಜ್ಞತೆಗಳು
ಶಿಕ್ಷಕವೃಂದ
ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು